ಶ್ರೀ ಎಂ. ಚಿಕ್ಕಲಿಂಗಯ್ಯನವರು.—ಇಲ್ಲಿ 4 ಸೊಸ್ಯೆಟಿ ಗಳಿವೆಯೆಂದು ಹೇಳಿದ್ದೀರಿ, ಇವು ಯಾವ ನಮೂನೆಯವು?

ಶ್ರೀ ಕೆ. ಹನುಮಂತಯ್ಯನವರು.—ಉತ್ತರದಲ್ಲೇ ಹೇಳಿದೆ.

Purchase and Issue Prices of Paddy procured.

Q.—119. **Sri M. LINGANNA** (Nanjangud).—

Will the Government be pleased to state:—

(*a*) the total quantity of paddy that is being procured during the current year till now in the State;

(*b*) the total amount of purchase price of such total quantity of paddy procured;

(*c*) the total value of issue price (lumpsum) of such procured quantity as per the present increased rate?

A.—**Sri H. SIDDAVEERAPPA** (Minister for Home Affairs and Agriculture),—

(*a*) 16,17,097 pallas (during the current harvest).

(*b*) Rs. 3,22,78,375.

(*c*) Rs. 4,95,26,509.

ಶ್ರೀ ಎಂ. ಲಿಂಗಣ್ಣನವರು.—Issue priceನ ಮೊತ್ತ 4,95,26,509 ರೂಪಾಯಿಗಳೆಂದು ಹೇಳಿದ್ದೀರಿ. ಯಾವ ಆಧಾರದ ಮೇಲೆ ಇದನ್ನು ಲೆಕ್ಕಹಾಕಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ನಾವು ಈ ವರ್ಷ ಎಷ್ಟು ದವಸವನ್ನು procure ಮಾಡಿದ್ದೇವೆಯೋ ಅದರ ಮೇಲೆ ಇತ್ತೀಚಿನ revised ದರಗಳ ಪ್ರಕಾರ ಲೆಕ್ಕ ಹಾಕಿದ್ದೇವೆ.

ಶ್ರೀ ಎಂ. ಲಿಂಗಣ್ಣನವರು.—ಕೊಂಡುಕೊಳ್ಳುವ ಬೆಲೆಯ ಮೊತ್ತವನ್ನೂ ಮಾರಿರುವ ಬೆಲೆಯ ಮೊತ್ತವನ್ನೂ ಹೋಲಿಸಿದರೆ, issue price ಜಾಸ್ತಿಯಾಗಿರುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಈ issue priceನ. ಲೆಕ್ಕಹಾಕಿರುವುದು 10-4-52ರಲ್ಲಿ. ನಾವು ದರವನ್ನು ಹೆಚ್ಚು ಮಾಡಿರುವುದರ ಪ್ರಕಾರ ಇದರಂತೆ ಮೊದಲನೆ ದರ್ಜೆ ಅಕ್ಕಿಗೆ 66-10-8 ರೂಪಾಯಿ ಮಾಡಿದೆ, ಎರಡನೆಯ ಗ್ರೇಡಿಗೂ 57-4-0 ರೂಪಾಯಿ ಮಾಡಿದೆ.

ಶ್ರೀ ಎಂ. ಲಿಂಗಣ್ಣನವರು.—ಅಂದರೆ ಸುಮಾರು 2 ಕೋಟಿ ರೂಪಾಯಿಗಳಷ್ಟು ರೈತರಿಂದ ಲಾಭ ಪಡೆದು ಕೊಂಡಿದ್ದರ ಮೇಲೆ, ಅವರುಗಳಿಗೆ ಪಲ್ಲಾ ಒಂದಕ್ಕೆ ಒಂದು ರೂಪಾಯಿ, ಎರಡು ರೂಪಾಯಿ ಬೋನಸ್ ಕೊಡುವುದನ್ನು ಯೋಚನೆಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಬೋನಸ್ ಕೊಡುವುದಕ್ಕೆ, ಅವರಿಂದ ಈಚೆಗೆ ತೆಗೆದುಕೊಂಡಿಲ್ಲ. 10-4-52ರಲ್ಲಿ ನಮ್ಮಲ್ಲಿ ಇಷ್ಟು ದಾಸ್ತಾನಿರಲಿಲ್ಲ. ಆಗ್ಗೆ 9,35,650 ಪಲ್ಲ ಬತ್ತ, 1,36,001 ಪಲ್ಲ ಅಕ್ಕಿ ಮಾತ್ರ ನಮ್ಮಲ್ಲಿ ಇಲ್ಲಿ ಸ್ಥಳದಲ್ಲಿ ನಂಗ್ರಹಿಸಲಾದ ದವಸ ಇತ್ತು.

ಶ್ರೀ ಎಂ. ಲಿಂಗಣ್ಣನವರು.—ಆ period ನಲ್ಲಿದ್ದ ದಾಸ್ತಾನೂ ಸ್ಥಳದಲ್ಲೇ procure ಮಾಡಿದ್ದು. ಅದರಿಂದಲೂ ಲಾಭ ಪಡೆದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದರಲ್ಲಿ ಅಷ್ಟು ಲಾಭ ಪಡೆದಿಲ್ಲ.

ಶ್ರೀ ಎಂ. ಲಿಂಗಣ್ಣನವರು.—ಲಾಭ ಎಷ್ಟು ಪಡೆದಿದ್ದೀರೋ ಅದರಂತೆಯೇ ಲೆಕ್ಕ ಹಾಕಿ ಈ ದವಸಕ್ಕೂ ದಾಮಾಷಾ ಪ್ರಕಾರ ಲಾಭ ಕೊಡುವುದಕ್ಕಾಗುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ನಾನು ಮೊದಲೇ ಅರಿಕೆ ಮಾಡಿಕೊಂಡಿದ್ದೇನೆ, ಇದರಲ್ಲಿ ನಮಗೇನೂ ಲಾಭ ಬರುತ್ತಿಲ್ಲ. ಇಲ್ಲಿ ಕೊಡಿರುವುದನ್ನೂ ಹೊರಗಡೆಯಿಂದ ತರಿಸಿರುವುದನ್ನೂ ಎಲ್ಲಾ ಒಟ್ಟಿಗೆ ಲೆಕ್ಕಕ್ಕೆ ತೆಗೆದುಕೊಂಡು pool ಗೆ ಹಾಕಿ ಮೂರು ಕಾಸೂ ಲಾಭ ವಿಲ್ಲದೆ ಮಾರಾಟಮಾಡುತ್ತಿದ್ದೇವೆ.

Sri M. LINGANNA.—I am not asking about the issue prices of the total quantity of grains procured and brought from outside the State. What I am concerned about is that Government have made certain profits..... .....

Mr. SPEAKER.—The Member must not make a statement during question hour.

ಶ್ರೀ ಎಂ. ಲಿಂಗಣ್ಣನವರು.—ನಮ್ಮ ರೈತರಿಂದ ಹೆಚ್ಚು ಹಣವನ್ನು ಪಡೆದು ಅವರಿಗೇ ಕೊಡುವುದು ಸೂಕ್ತವೆಂದು ಯೋಚನೆ ಮಾಡಲಿಲ್ಲವೆ!

Sri H. SIDDAVEERAPPA.—ಆ ರೀತಿ ಅಲ್ಲ. The issue price has been fixed according to the Government of India calculations, a totally different calculation altogether.

ಶ್ರೀ ಎಂ. ಲಿಂಗಣ್ಣನವರು.—ಹಿಂದಿನ ಸರ್ಕಾರದವರು ಹೀಗೆ ರೈತರಿಂದ ಹಣ ಜಾಸ್ತಿ ಬಂದಿದೆಯೆಂದು ರೈತರಿಗೆ ಬೋನಸ್ ಕೊಟ್ಟಿರುವುದು ಗೊತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರ್ಕಾರದ ದೃಷ್ಟಿಯಲ್ಲಿ ಈಗ ಕೊಟ್ಟಿರುವ ಧಾರಣೆ ಸರಿಯಾಗಿದೆ. ಇದಕ್ಕಿಂತ ಹೆಚ್ಚಾಗಿ ಕೊಡುವುದು ಪರಿಶೀಲನೆಯಲ್ಲಲ್ಲ.

ಶ್ರೀ ಎಂ. ಲಿಂಗಣ್ಣನವರು.—ಬೆಳೆದಿರುವ ರೈತರಿಗೆ ಪಲ್ಲಕ್ಕೆ 19-20 ರೂಪಾಯಿಗಳಂತೆ ಕೊಟ್ಟು ಕೊಂಡು ಕೊಂಡು 30 ರೂಪಾಯಿನಂತೆ ಬೀಜವರಿ ಬತ್ತವನ್ನು ಕೊಡುತ್ತಿದ್ದೀರಿ, ಇದನ್ನು ಕಡಮೆಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಹಳ ಕಡಮೆ ಮಾಡಿದ್ದೇವೆ.

ಶ್ರೀ ಎಂ. ಲಿಂಗಣ್ಣನವರು.—ಯಾವಾಗ?

ಶ್ರೀ ಎಚ್. ಸಿದ್ದವೀರಪ್ಪನವರು.—ಸುಮಾರು ಒಂದು ವಾರವಾಗಿರಬಹುದು.

ಶ್ರೀ ಎಂ. ಲಿಂಗಣ್ಣನವರು.—ಹಿಂದೆ ಕೊಂಡುಕೊಂಡಿರುವ ರೈತರಿಗೇನು ಪರಿಹಾರ?

(ಉತ್ತರವಿಲ್ಲ. ನಗು!)

Sri K. PUTTASWAMY (Srirangapatna).—Are the surplus holders not subsidising food after the Central Government stopped its subsidy?

Sri H. SIDDAVEERAPPA.—It does not arise exactly in the way in which the Hon'ble Member calculates it.

Sri K. PUTTASWAMY.—Then what, is the other calculation? It is clear that a profit of 1½ crores of rupees has been made out of the internally procured foodgrains. Is that not made use of for balancing the rates of imported foodgrains?

Sri H. SIDDAVEERAPPA.—Sir, I have made that point abundantly clear that 1½ crores do not represent the profit made by us as is sought to be made out. I have made it clear, in the course of replying to a supplementary by Sri A. Bheemappa Naik, that we have made about 90 lakhs. But that will have to be seen against the huge subsidy to the tune of 2 crores and odd that we have to meet in the sale price of milo. The pool price has been fixed just in the same way as any other State in India fixes according to the direction and guidance of the Government of India.

Sri K. PUTTASWAMY.—Would it not be better to own the debt due to the surplus holder?

Sri H. SIDDAVEERAPPA.—Government are really grateful to the surplus holder for having grown more and given to the Government. (Laughter)

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಶಿವಮೊಗ್ಗ ಡಿಸ್ಟ್ರಿಕ್ಟಿನಿಂದ ಎಷ್ಟು ಪ್ರೊಕ್ಯೂರ್ ಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಸುಮಾರು ಹತ್ತು ಲಕ್ಷ ಪಲ್ಲ. ಶಿವಮೊಗ್ಗ ಡಿಸ್ಟ್ರಿಕ್ಟಿನವರು ಬಹಳ ಚೆನ್ನಾಗಿ ಬೆಳೆದಿದ್ದಾರೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಯಾವ ಆಧಾರದ ಮೇಲೆ ಈಗ ಕೊಟ್ಟಿರುವ ಬೆಲೆ ನರಿಯಾದ ಬೆಲೆ ಎಂದು ಹೇಳುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—1938ನೆಯ ಇಸವಿಯ ಬೆಲೆಯೊಡನೆ ಹೋಲಿಸಿದರೆ, ಸರ್ಕಾರದವರು ಯಾವ ರೀತಿ ಏರಿಸುತ್ತಾ ಹೋಗಿದ್ದಾರೆಂಬುದು ಗೊತ್ತಾಗುತ್ತದೆ. ಈಗ ಬಹಳ ಹೆಚ್ಚು ಕೊಡುತ್ತಿದ್ದೇವೆ. ಇತ್ತೀಚೆಗೆ ಆರು ಸಾರಿ revise ಮಾಡಿದ್ದೇವೆ. ಪಲ್ಲಕ್ಕೆ ರೂ. 11-8-0 ಗಳಿಂದ 20 ರೂಪಾಯಿಗಳ ವರೆಗೆ ಬಂದಿದೆ.

ಶ್ರೀ ಕೆ. ವಿ. ಶಂಕರಗೌಡರು.—ರೈತರಿಗೆ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆಂಬುದರ ಆಧಾರದ ಮೇಲೆ ರೆಕ್ಕ ಹಾಕಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದನ್ನೇ ಆಧಾರವೆಂದು ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಈಗ ಕೊಡತಕ್ಕ ಧಾರಣೆ ಚೆನ್ನಾಗಿದೆ.

Sri K. V. SHANKARA GOWDA.—Is it not arbitrary?

Sri H. SIDDAVEERAPPA.—I do not say it is arbitrary. It is based on some rough and ready calculations.

ಶ್ರೀ ಕೆ. ವಿ. ಶಂಕರಗೌಡರು.—ಈಗ ಹಳ್ಳಿಗಳಲ್ಲಿ ಸರ್‌ಪ್ಲಸ್ ಇಟ್ಟುಕೊಂಡಿದ್ದರೆ ಯಾವ ಧಾರಣೆಯಲ್ಲಿ ಅವನು ಮಾರಬಹುದು?

Sri H. SIDDAVEERAPPA.—The issue price structure is maintained. We have not changed it.

ಶ್ರೀ ಕೆ. ವಿ. ಶಂಕರಗೌಡರು.—ಆ ಧಾರಣೆಗೂ ನೀವು ಪ್ರೊಕ್ಯೂರ್ ಮಾಡಿರುವ ಧಾರಣೆಗೂ ವ್ಯತ್ಯಾಸ ಬರುತ್ತದಲ್ಲವೆ?

Sri H. SIDDAVEERAPPA.—What I am saying is: general sales we have not recognised. Still, the Government have a monopoly sale.

ಶ್ರೀ ಕೆ. ವಿ. ಶಂಕರಗೌಡರು.—ಸರ್ಕಾರದ ರೇಟಿಗೆ ಹೊರಗೆ ಮಾರುವುದಕ್ಕೆ ಅವಕಾಶವಿದೆಯೆಂದು ಹೇಳಿದ್ದೀರಿ. ಹಾಗಿದ್ದರೆ ರೈತರಲ್ಲಿ ಹೆಚ್ಚಿನ ದವಸವಿದ್ದರೆ ಸರ್ಕಾರದವರು ಮಾರುವ ಬೆಲೆಗೇ ಅವರೂ ಮಾರುವುದಕ್ಕೆ ಅವಕಾಶ ಕೊಡುತ್ತೀರಾ?

Sri K. HANUMANTHAIYA (Chief Minister).—Sir, all these questions will be resolved when the new Food policy is going to be announced.

ಶ್ರೀ ಯಂ. ರಾಜಶೇಖರಮೂರ್ತಿಯವರು (ಯಳಂದೂರು).—ರೈತರಿಂದ ತೆಗೆದುಕೊಂಡು ಮಾರುವ ಬತ್ತಕ್ಕೆ ಎಷ್ಟು ಲಾಭ ಬರುತ್ತದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಲಾಭವೇನೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ರೈತರಿಂದ ಕದಮೆ ಬೆಲೆಗೆ ಕೊಂಡು ಹೆಚ್ಚು ಬೆಲೆಗೆ ಮಾರುವಾಗ ಅದರಲ್ಲಿ ಮಣ್ಣು, ಕಲ್ಲು, ಬತ್ತ ಇದ್ದರೆ ಅದಕ್ಕೆ ರೈತರು ಜವಾಬ್ದಾರರೋ ಅಥವಾ ಇನ್ನಾರು ಜವಾಬ್ದಾರರು?

ಶ್ರೀ ಎಚ್. ಸಿದ್ದವೀರಪ್ಪನವರು.—ನಾವು ಕೇಳುವುದಿಲ್ಲ. ಹೆಚ್ಚು ಧಾರಣೆಗೆ ಮಾರುವುದಿಲ್ಲ. ಇಂಡಿಯಾ ಸರ್ಕಾರದವರು ಎಷ್ಟು ಗೊತ್ತು ಮಾಡಿದ್ದಾರೋ ಅಷ್ಟಕ್ಕೆ ತರುತ್ತೇವೆ.

Mr. SPEAKER.—The Member can raise all these points during the discussion of food policy.

Question hour is over.

9-30 A.M.

QUESTIONS FOR ANSWERS ON THE DAY NOT TAKEN UP.

Inadequate grant for Grow More Food Scheme in Hassan District.

Q.—75. **Sri B. N. BORANNA GOWDA** (Belur).—

Will the Government be pleased to state:—

(*a*) the grant given to Hassan District during 1951-52 for the "Grow More Food" Scheme;